# ಆಹಾ ಸುದ್ದಿ!

★ ಸಸಿತೋಟ

ಇಂಗ್ಲೆಂಡ್‌ನ ಕೆಂಟುಕಿಯ ಕಾಲೇಜೊಂದು ವಿಡಿಯೋ ಗೇಮ್ ಅನ್ನು ಅಧಿಕೃತ ಕ್ರೀಡೆ ಎಂದು ಘೋಷಿಸಿ ವಿದ್ಯಾರ್ಥಿ ವೇತನ ನೀಡಲು ಮುಂದೆ ಬಂದಿದೆಯಂತೆ. 'ಲೀಗ್ ಆಫ್ ಲೆಜೆಂಡ್ಸ್' ಎಂಬ ಆನ್‌ಲೈನ್ ಗೇಮ್ ಅಭ್ಯಾಸ ಮಾಡಿ ಸ್ಪರ್ಧೆಯಲ್ಲೂ ಭಾಗವಹಿಸಬೇಕಂತೆ. ಕ್ರೀಡಾ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಈ ರೀತಿ ಬೆಳೆಸುವುದು ಬಹು ಸುಲಭ!



ಇಂಗ್ಲೆಂಡ್‌ನ ಕ್ರಿಕೆಟ್ ಆಟಗಾರ ಕೆವಿನ್ ಪೀಟರ್ಸನ್ ಹೊಟ್ಟೆಯ ಮೇಲೆ ಹಾಕಿಸಿಕೊಂಡ ಹಚ್ಚೆಯಿದು. ಕ್ರಿಕೆಟ್ ಮತ್ತು ಸ್ವಪ್ರಶಂಸೆಯನ್ನು ಹುಚ್ಚನಂತೆ ಪ್ರೀತಿಸುವ ಕೆವಿನ್ ತಾನು ಎಲ್ಲೆಲ್ಲಿ ಶತಕವನ್ನು ಬಾರಿಸಿದ್ದಾನೋ ಅವುಗಳನ್ನು ಹೊಟ್ಟೆಯ ಮೇಲೆ ಮ್ಯಾಪ್‌ನ ಹಚ್ಚೆ ಹಾಕಿಸಿ ಕೆಂಪು ಬಣ್ಣದಿಂದ ಗುರುತು ಮಾಡಿಸಿಕೊಂಡಿದ್ದಾನಂತೆ. ಇನ್‌ಸ್ಟಾಗ್ರಾಂನಲ್ಲಿ ಹಾಕಿಕೊಂಡ ಚಿತ್ರವಿದು. ಎಲ್ಲರೂ ಸಾಧನೆಯನ್ನು ಪುಸ್ತಕದಲ್ಲಿ ದಾಖಲಿಸಿದರೆ ಈತ ಹೊಟ್ಟೆಯೆಂಬೋ ಪುಸ್ತಕದಲ್ಲಿ ದಾಖಲಿಸಿದ್ದಾನೆ ಅಷ್ಟೆ.



ಈತ 50 ಸಾವಿರ ಡಾಲರ್ ಮೌಲ್ಯದ 94 ಆ್ಯಪಲ್ ಐಫೋನ್‌ಗಳಿಂದ ಮಾಡಿದ ಒಳಂಗಿಯನ್ನು ಧರಿಸಿ ಹಾಂಕಾಂಗ್‌ನಿಂದ ಆಗಮಿಸಿ, ಚೀನಾ ವಿಮಾನ ನಿಲ್ದಾಣದಿಂದ ಹೊರಬರಲು ಯತ್ನಿಸಿದಾಗ ಕಸ್ಟಮ್ಸ್‌ನವರಿಗೆ ಸಿಕ್ಕಿಬಿದ್ದ. ಅಡ್ಡಾದಿಡ್ಡಿ ನಡಿಗೆ, ಬಾಗಿಸದ ಮೊಳಕಾಲು, ಸೆಟೆದುಕೊಂಡ ಸ್ನಾಯುಗಳಿಂದ ಅಧಿಕಾರಿಗಳು ಸುಲಭವಾಗಿ ಗುರುತಿಸಿದರಂತೆ. ಒಳಂಗಿಯ ಬದಲು ಮೊಬೈಲುಗಳ ಹೊರಂಗಿಯನ್ನೇ ಫ್ಯಾಷನ್ ಎಂದು ಧರಿಸಿದ್ದರೆ ಬಚಾವಾಗುತ್ತಿದ್ದನೇನೋ!

ಶಿಕಾಗೋದ 'ಸ್ಟ್ರಿಪ್ ಕ್ಲಬ್'ಗೆ ಸ್ವಚ್ಛತೆಗಾಗಿ ಪ್ರಶಸ್ತಿ ನೀಡಲಾಗಿದೆಯಂತೆ. ಈ ಬಗ್ಗೆ ಹಲವರು ತಗಾದೆ ತೆಗೆದಾಗ, ಸ್ಟ್ರಿಪ್ ಕ್ಲಬ್‌ನವರು ಕ್ಲೀನಾಗಿ ಉಡುಪು ತೊಡುತ್ತಾರೆ ಎಂದು ತೀರ್ಪುಗಾರರು ಸಮರ್ಥಿಸಿಕೊಂಡರಂತೆ. ಹೇಳಿಕೇಳಿ ಸ್ಟ್ರಿಪ್‌ಕ್ಲಬ್, ಉಡುಪುಗಳನ್ನು ಕ್ಲೀನಾಗಿ ಕಳಚಿ ಮನರಂಜನೆ ನೀಡುವವರು ಎಂದು ಬಿಡಿಸಿ ಹೇಳಬಹುದಿತ್ತು.



ಚೀನಾದ ಕೇಂದ್ರ ವಿಶ್ವವಿದ್ಯಾನಿಲಯದಲ್ಲಿ ಎಸೆದಿರುವ ಸೈಕಲ್‌ಗಳ ರಾಶಿ. ಇತ್ತೀಚೆಗೆ ಅಲ್ಲಿ ಸೈಕಲ್‌ಗಳ ಗೋಪುರವನ್ನು ನಿರ್ಮಿಸಿ ಜಾಗತಿಕ ದಾಖಲೆ ಮಾಡಲಾಯಿತು. ಅಲ್ಲಿ ದಾಖಲೆಗೆಂದೇ ದಾಖಲೆ ಮಾಡುವ ಅಗತ್ಯವಿಲ್ಲ. ಜನಸಂಖ್ಯೆಯೂ ಅಧಿಕ, ಸೈಕಲ್ ಮೇಲೆ ಸಂಚರಿಸುವವರೂ ಹೆಚ್ಚು. ನಿತ್ಯ ದಾಖಲೆಗಳನ್ನು ಮುರಿಯುತ್ತಲೇ ಹೋಗಬಹುದು.



ಶಾಂಘೈನಲ್ಲಿ ಏರ್ಪಡಿಸಿದ್ದ ಮೀನುಗಳ ಫುಟ್ಬಾಲ್ ಪಂದ್ಯವಿದು. ಗೋಲ್ ಬಾರಿಸಲು ಅದೇನು ಆಮಿಷ ಒಡ್ಡುತ್ತಾರೋ!